# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 28 |
| 2 | ಸದಸ್ಯರ ಹೆಸರು | : | ಶ್ರೀ ಎನ್ ರವಿಕುಮಾರ್ |
| 3 | ಉತ್ತರಿಸಬೇಕಾದ ದಿನಾಂಕ | : | 16.07.2019 |
| 4 | ಉತ್ತರಿಸಬೇಕಾದ ಸಚಿವರು | : | ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ರಾಜ್ಯದಲ್ಲಿ 2019-20ನೇ ಶೈಕ್ಷಣಿಕ ಸಾಲಿನಲ್ಲಿ ಡೀಮ್ಡ್ ಯುನಿವರ್ಸಿಟಿ ವೈದ್ಯಕೀಯ ಕಾಲೇಜುಗಳು ಸರ್ಕಾರಕ್ಕೆ ಎಷ್ಟು ಪ್ರಮಾಣದ ವೈದ್ಯಕೀಯ ಸೀಟುಗಳನ್ನು ಬಿಟ್ಟು ಕೊಡಬೇಕಾಗಿದೆ; ಈ ಕುರಿತು ಸರ್ಕಾರಕ್ಕೂ ವೈದ್ಯಕೀಯ ಕಾಲೇಜುಗಳ ಆಡಳಿತ ಮಂಡಳಿಗೂ ಇರುವ ಒಪ್ಪಂದವೇನು; | ಸರ್ಕಾರ ಮತ್ತು ಡೀಮ್ಡ್ ಯುನಿವರ್ಸಿಟಿ ವೈದ್ಯಕೀಯ ಕಾಲೇಜುಗಳ ನಡುವೆ ಯಾವುದೇ ಪರಸ್ಪರ ಒಡಂಬಡಿಕೆಯು ಒಪ್ಪಂದವಾಗಿರುವುದಿಲ್ಲ. ಆದರೆ ಕೆಲವು ಡೀಮ್ಡ್ ಯುನಿವರ್ಸಿಟಿ ಕಾಲೇಜುಗಳು ಉದಾಹರಣೆಗೆ: ಯೆನೆಪೋಯ ವೈದ್ಯಕೀಯ ಕಾಲೇಜ್ & ಆಸ್ಪತ್ರೆ, ಮಂಗಳೂರು ಮತ್ತು ಕೆ.ಎಸ್.ಹೆಗಡೆ ಮೆಡಿಕಲ್ ಅಕಾಡೆಮಿ, ಮಂಗಳೂರು ಕಾಲೇಜುಗಳು ಪ್ರಾರಂಭವಾದಾಗ ಸರ್ಕಾರದ ಜೊತೆ ಎಂ.ಓ.ಯು ಮಾಡಿಕೊಂಡು ಹೆಚ್ಚುವರಿಯಾದ ಸೀಟುಗಳಲ್ಲಿ ಶೇಕಡ 25%ರಷ್ಟು ಸೀಟುಗಳನ್ನು ಸರ್ಕಾರಕ್ಕೆ ಬಿಟ್ಟುಕೊಟ್ಟಿರುತ್ತಾರೆ. |
| ಆ | 2019-20ನೇ ಶೈಕ್ಷಣಿಕ ಸಾಲಿನಲ್ಲಿ ಎಷ್ಟು ಡೀಮ್ಡ್ ಯುನಿವರ್ಸಿಟಿ ವೈದ್ಯಕೀಯ ಕಾಲೇಜುಗಳು ಸರ್ಕಾರಕ್ಕೆ ವೈದ್ಯಕೀಯ ಎಷ್ಟು ಸೀಟುಗಳನ್ನು ಬಿಟ್ಟು ಕೊಡುತ್ತಿವೆ; ಹಾಗೂ ನೀಡದಿರುವ ಸೀಟುಗಳೆಷ್ಟು; ಯಾವ ಕಾರಣಕ್ಕೆ ನೀಡುತ್ತಿಲ್ಲ; | ಡೀಮ್ಡ್ ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸುವಾಗ ಸರ್ಕಾರದೊಂದಿಗೆ MOU ಮಾಡಿಕೊಂಡಿರುವಂತೆ ಈ ಕೆಳಕಂಡಂತೆ ಸೀಟುಗಳನ್ನು ಬಿಟ್ಟುಕೊಡುತ್ತಿವೆ. (table below) |

| ಕ್ರ.ಸಂ | ಸಂಸ್ಥೆಯ ಹೆಸರು | ಸೀಟು |
|---|---|---|
| 1. | ಜವಹರಲಾಲ್ ನೆಹರು ಮೆಡಿಕಲ್ ಕಾಲೇಜು, ಬೆಳಗಾವಿ | 12 |
| 2. | ಜೆಎಸ್ಎಸ್ ಕಾಲೇಜು, ಮೈಸೂರು | 12 |
| 3. | ಕಸ್ತೂರಬಾ ಮೆಡಿಕಲ್ ಕಾಲೇಜು, ಮಂಗಳೂರು | 52 |
| 4. | ಕೆ.ಎಸ್ ಹೆಗ್ಡೆ ಮೆಡಿಕಲ್ ಅಕಾಡೆಮಿ, ಮಂಗಳೂರು | 12 |
| 5. | ಯೆನಪೋಯ ಮೆಡಿಕಲ್ ಕಾಲೇಜು, ಮಂಗಳೂರು | 13 |
| | **ಒಟ್ಟು** | **101** |

ಈ ಕೆಳಕಂಡ ಕಾಲೇಜುಗಳು ಸರ್ಕಾರದೊಂದಿಗೆ MOU ಮಾಡಿಕೊಂಡಿರುವುದಿಲ್ಲ.

1. ಶ್ರೀ ದೇವರಾಜ್ ಅರಸ್ ವೈದ್ಯಕೀಯ ಕಾಲೇಜು, ಕೋಲಾರ.
2. ಶ್ರೀ ಬಿ.ಎಲ್.ಡಿ.ಇ ವೈದ್ಯಕೀಯ ಕಾಲೇಜು, ಬಿಜಾಪುರ.
3. ಶ್ರೀ ಸಿದ್ದಾರ್ಥ ಮೆಡಿಕಲ್ ಕಾಲೇಜು, ತುಮಕೂರು.

| | | |
|---|---|---|
| | | ಮುಂದುವರೆದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಡೀಮ್ಡ್ ಯೂನಿವರ್ಸಿಟಿಯ ಎಲ್ಲಾ ಸೀಟುಗಳನ್ನು ಬಿಟ್ಟುಕೊಡುವಂತೆ ಕೇಂದ್ರ ಸರ್ಕಾರವು ಆದೇಶಿಸಿದ್ದು, ಆದೇಶದ ಉದ್ಧೃತ ಭಾಗ ಕೆಳಕಂಡಂತಿದೆ<br>**" Please note that as per directions of the Supreme Court of India all Deemed Universities are required to contribute 100% of Recognized and Permitted Medical/Dental seats. Therefore, in case any increase of UG seats such newly created seats must also be contributed immediately, as and when permission letter is received."** |
| ಇ | ಸರ್ಕಾರಕ್ಕೆ ಸೀಟುಗಳನ್ನು ಬಿಟ್ಟು ಕೊಡದಿರುವ ಡೀಮ್ಡ್ ಯುನಿವರ್ಸಿಟಿ ವೈದ್ಯಕೀಯ ಕಾಲೇಜುಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ: ಸೀಟು ಬಿಟ್ಟು ಕೊಡದಿರುವ ವೈದ್ಯಕೀಯ ಕಾಲೇಜುಗಳು ಸರ್ಕಾರಕ್ಕೆ ಪಾವತಿ ಮಾಡಿರುವ ದಂಡದ ಮೊತ್ತವೆಷ್ಟು: | ಯೆನೆಪೋಯ ವೈದ್ಯಕೀಯ ಕಾಲೇಜ್ & ಆಸ್ಪತ್ರೆ, ಮಂಗಳೂರು ಮತ್ತು ಕೆ.ಎಸ್.ಹೆಗಡೆ ಮೆಡಿಕಲ್ ಅಕಾಡೆಮಿ, ಮಂಗಳೂರು ಕಾಲೇಜುಗಳ ವಿರುದ್ಧ ಪ್ರವೇಶಾತಿಗಾಗಿ ಹೈಕೋರ್ಟ್‌ನಲ್ಲಿ ಮೊಕದ್ದಮೆ ಹೂಡಲಾಗಿದ್ದು, ಹೆಚ್ಚು ಸೀಟುಗಳನ್ನು ವಾಪಸ್ ಪಡೆಯಲು ಕ್ರಮ ಜರುಗಿಸಲಾಗಿರುತ್ತದೆ. |
| ಈ | ಡೀಮ್ಡ್ ಯುನಿವರ್ಸಿಟಿ ವೈದ್ಯಕೀಯ ಕಾಲೇಜುಗಳಿಗೆ ಸರ್ಕಾರವು ಯಾವ ಯಾವ ರಿಯಾಯಿತಿ ಸೌಲಭ್ಯಗಳನ್ನು ನೀಡುತ್ತಿದೆ? | ಯಾವುದೇ ರಿಯಾಯಿತಿ ಸೌಲಭ್ಯಗಳನ್ನು ನೀಡುತ್ತಿಲ್ಲ. |

ಸಂಖ್ಯೆ: ಎಂಇಡಿ /50/ಎಂಎಸ್‌ಎಫ್/2019

(ಈ ತುಕಾರಾಮ್)
ವೈದ್ಯಕೀಯ ಶಿಕ್ಷಣ ಸಚಿವರು.